# ಖಾಸಗಿ ದಾಖಲೆಗಳ ಸಂಗ್ರಹ

ನಾಡಿನ ಚರಿತ್ರೆಗೆ ಸಂಬಂಧಿಸಿದ ಐತಿಹಾಸಿಕ ಮಹತ್ವವುಳ್ಳ ದಾಖಲೆಗಳನ್ನು ಪರಿವೀಕ್ಷಣೆ ಕಾರ್ಯದ ಮೂಲಕ, ರಾಷ್ಟ್ರೀಯ ಪತ್ರಾಗಾರ, ದೇಶದ ಇತರೆ ರಾಜ್ಯಗಳ ಪತ್ರಾಗಾರಗಳು, ವಿದೇಶಿ ಪತ್ರಾಗಾರಗಳು ಹಾಗೂ ಖಾಸಗಿ ವ್ಯಕ್ತಿ ಮತ್ತು ಸಂಘ-ಸಂಸ್ಥೆಗಳಿಂದ ಸಂಗ್ರಹಿಸುವ ಕಾರ್ಯವನ್ನು ಪರಿವೀಕ್ಷಣೆ ಶಾಖೆಯ ಮೂಲಕ ಹಮ್ಮಿಕೊಳ್ಳಲಾಗುವುದು.

## 2013–14

1. ಶ್ರೀ ಎಂ.ಎನ್. ಮೋರ್ಚಿಂಗ್, ಅವರ ಖಾಸಗಿ ಸಂಗ್ರಹಾಲಯದಿಂದ ದಿ: ಶ್ರೀಮತಿ ಎಂ.ಆರ್. ಲಕ್ಷ್ಮಮ್ಮ, ಸ್ವಾತಂತ್ರ್ಯ ಹೋರಾಟಗಾರ್ತಿ, ಇವರು ಪ್ರಕಟಿಸಿದ 1950–52ರ ವರೆಗಿನ ಸೋದರಿ ಪತ್ರಿಕೆಯ ನಕಲು ಪ್ರತಿಗಳನ್ನು ಸಂಗ್ರಹಿಸಲಾಗಿದೆ.

2. ಶ್ರೀ ಹೆಚ್.ಪಿ.ಶಶಿಧರ ಮೂರ್ತಿ, (ಉಪ ನಿರ್ದೇಶಕರು) ಇವರಿಂದ ಐತಿಹಾಸಿಕ ಪುಸ್ತಕಗಳನ್ನು ಮೈಸೂರು ವಿಬಾಗೀಯ ಪತ್ರಾಗಾರ ಕಛೇರಿಯಲ್ಲಿ ಸಂಗ್ರಹಿಸಲಾಗಿದೆ.

## 2014–15

1. ವೈ.ಎನ್.ಹೊಸಕೋಟೆ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ, ಇಲ್ಲಿ ಪಾಳೇಗಾರರ ಚರಿತ್ರೆಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸುವ ಕುರಿತು ಪರಿವೀಕ್ಷಣೆ ಕಾರ್ಯ ನಡೆಸಲಾಗಿದೆ.

2. ಮಹಾರಾಷ್ಟ್ರ ರಾಜ್ಯದ ಪತ್ರಾಗಾರ ಇಲಾಖೆಯಿಂದ ದಾಖಲೆಗಳ ಮೈಕ್ರೋಫಿಲ್ಮ ಸುರುಳಿಗಳನ್ನು ಪಡೆಯಲಾಗಿದೆ.

3. ಕರ್ನಾಟಕ/ಮೈಸೂರು ರಾಜ್ಯಕ್ಕೆ ಸೇರಿದ ಕಿತ್ತೂರು ರಾಣಿ ಚೆನ್ನಮ್ಮ, ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಇವರುಗಳಿಗೆ ಸಂಬಂಧಿಸಿದ ಐತಿಹಾಸಿಕ ಮಹತ್ವದ ದಾಖಲೆಗಳನ್ನು ಇಂಡಿಯಾ ಆಫೀಸ್ ಲೈಬ್ರರಿ, ಲಂಡನ್ ಇವರಿಂದ (ಸು.18,700 ಪುಟಗಳು) ಐತಿಹಾಸಿಕ ದಾಖಲೆಗಳ ಸ್ಕ್ಯಾನಿಂಗ್ ಪ್ರತಿಯನ್ನು ಪಡೆಯಲಾಗಿದೆ.

4. ರಾಷ್ಟ್ರೀಯ ಪತ್ರಾಗಾರ ನವದೆಹಲಿ, ಇಲ್ಲಿಂದ ಹೈದರಾಲಿ ಹಾಗೂ ಟಿಪ್ಪುಸುಲ್ತಾನ್‌ರಿಗೆ ಸಂಬಂಧಿಸಿದ ದಾಖಲೆಗಳನ್ನು ಸಂಗ್ರಹಿಸಲಾಗಿದೆ.

# 2015–16

1. ಶ್ರೀ ವಿದ್ಯಾಧರ ಗುರೂಜಿ, ಸ್ವಾತಂತ್ರ್ಯ ಹೋರಾಟಗಾರರು, ಕಲಬುರ್ಗಿ, ಇವರ ಸಂಗ್ರಹದಲ್ಲಿರುವ ಸ್ವಾತಂತ್ರ್ಯ ಹೋರಾಟ ಸಂದರ್ಭದ ಪತ್ರಗಳು, ಛಾಯಾಚಿತ್ರಗಳು, ಇತರ ಐತಿಹಾಸಿಕ ದಾಖಲೆಗಳ ಸಂಗ್ರಹಿಸುವ ಕುರಿತು ಪರಿವೀಕ್ಷಣೆ ಕಾರ್ಯ ನಡೆಸಲಾಗಿದೆ.

2. ಬೆಳಗಾಂ ಜಿಲ್ಲೆ, ಬೆಳಗಾಂ ತಾಲ್ಲೂಕು, ಹುದಲಿ ಗ್ರಾಮದ ಸಿದ್ದರಾಮಪ್ಪ ಅವರ ಸಂಗ್ರಹದಲ್ಲಿರುವ 1924ರ ಬೆಳಗಾಂ ಕಾಂಗ್ರೆಸ್ ಅಧಿವೇಶನ ಮತ್ತು ಗಾಂಧೀಜಿಗೆ ಸಂಬಂಧಿಸಿದ ಐತಿಹಾಸಿಕ ಛಾಯಾಚಿತ್ರಗಳನ್ನು ಇಲಾಖೆಗೆ ಪಡೆಯಲಾಗಿದೆ.

3. ಕಾಸರವಳ್ಳಿ ಎನ್.ನಾಗರಾಜರಾವ್, ಶಿವಮೊಗ್ಗ ಇವರ ಸಂಗ್ರಹದಲ್ಲಿರುವ ಮೈಸೂರು ಒಡೆಯರಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಗಳನ್ನು ಸಂಗ್ರಹಿಸುವ ಕುರಿತು ಪರಿವೀಕ್ಷಣೆ ಕಾರ್ಯ ನಡೆಸಲಾಗಿದೆ.